ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 36 ಬೆಮಪ್ರಾ 2016 (ಭಾ)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ 08-12-2016.

ಸುತ್ತೋಲೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 18(1ಎ) ರಡಿ ಕೆರೆ ಪುನರುಜ್ಜೀವನ ಶುಲ್ಕವನ್ನು ಪಾವತಿಸಿಕೊಳ್ಳುವ ಬಗ್ಗೆ.

* * * * *

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 18 (1ಎ) ರನ್ವಯ ಈ ಹಿಂದೆ ಪ್ರತಿ ಎಕರೆಗೆ ರೂ.1.00 ಲಕ್ಷದಂತೆ ಕೆರೆ ಪುನರುಜ್ಜೀವನ ಶುಲ್ಕ ವಿಧಿಸುವುದನ್ನು ಪರಿಷ್ಕರಿಸಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 24 ಶಾಸನ 2015, ದಿನಾಂಕ 10-09-2015 ರನ್ವಯ ಕಲಂ 18 (1ಎ) ಗೆ ತಿದ್ದುಪಡಿ ಮಾಡಿ ಕೆರೆ ಪುನರುಜ್ಜೀವನ ಶುಲ್ಕವನ್ನು ವಿಧಿಸಲು ಈ ಕೆಳಕಂಡಂತೆ ಅವಕಾಶವನ್ನು ಕಲ್ಪಿಸಲಾಗಿದೆ.

"(1A) Where an application for permission for development of building or land or sanction for sub-division of plot or layout of Private Street is submitted under section 15 or 17 to any Planning Authority, such Planning Authority shall levy and collect an additional prescribed fee for rejuvenation of lakes or tanks, if any, in that local planning area"

ಮೇಲ್ಕಂಡ ಕಾಯ್ದೆಯ ಅವಕಾಶದಂತೆ ಕೆರೆ ಪುನರುಜ್ಜೀವನ ಶುಲ್ಕವನ್ನು ವಿಧಿಸುವ ಸಂಬಂಧ ನಿಯಮಗಳನ್ನು ರಚಿಸುವ ಪ್ರಕ್ರಿಯೆ ಸರ್ಕಾರದ ಹಂತದಲ್ಲಿ ಜಾರಿಯಲ್ಲಿರುತ್ತದೆ. ನಿಯಮಗಳನ್ನು ಅಂತಿಮಗೊಳಿಸಲು ಕಾಲಾವಕಾಶದ ಅಗತ್ಯವಿರುತ್ತದೆ. ನಿಯಮಗಳನ್ನು ಅಂತಿಮಗೊಳಿಸುವವರೆಗೂ ಕಲಂ 15 ಮತ್ತು ಕಲಂ 17 ರನ್ವಯ ನೀಡಲಾಗುವ ಅನುಮೋದನೆಗಳಿಗೆ ಕೆರೆ ಪುನರುಜ್ಜೀವನ ಶುಲ್ಕವನ್ನು ಭರಿಸಿಕೊಳ್ಳುವ ದೃಷ್ಟಿಯಿಂದ ಸರ್ಕಾರದಿಂದ ಈ ಕೆಳಕಂಡಂತೆ ಶುಲ್ಕವನ್ನು ಭರಿಸಿಕೊಳ್ಳಲು ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು (ಬಿ.ಡಿ.ಎ. ಹೊರತುಪಡಿಸಿ) / ಯೋಜನಾ ಪ್ರಾಧಿಕಾರಗಳು (ಬಿಎಂಆರ್‌ಡಿಎ ವ್ಯಾಪ್ತಿಯಲ್ಲಿನ ಯೋಜನಾ ಪ್ರಾಧಿಕಾರಗಳನ್ನು ಹೊರತುಪಡಿಸಿ) / ಪುರಸಭೆ ಯೋಜನಾ ಪ್ರಾಧಿಕಾರಗಳು / ನಗರ ಸ್ಥಳೀಯ ಸಂಸ್ಥೆಗಳಿಗೆ ಈ ಮೂಲಕ ನಿರ್ದೇಶನ ನೀಡಲಾಗಿದೆ.

Sl. No.	Local Planning Area and Population	Fee per sq.m of land/plot
1	Local Planning Area with a population of ten lakhs and above	Rs.20/-

..2..

2	Local Planning Area with a population of one lakh and above but less than ten lakhs	Rs.15/-
3	Local Planning Area with a population of fifty thousand and above but less than one lakh	Rs.10/-
4	Local Planning Area with a population of twenty thousand and above but less than fifty thousand	Rs.5/-
5	Local Planning Area with a population of less than twenty thousand	Rs.3/-

NOTE:-

(i) Fee shall be collected under this rule for approval under section 17 or section 15.

(ii) In case if the approval is obtained under section 17, having paid the fees, approval under section 15 for the same place is exempted from payment of the fees. If fee is not collected under Section 17, fee shall be collected while according approval under section 15 for the land or plot.

ಕೆರೆ ಪುನರುಜ್ಜೀವನ ಶುಲ್ಕವನ್ನು ವಿಧಿಸುವ ಬಗ್ಗೆ ನಿಯಮಗಳನ್ನು ಅಂತಿಮಗೊಳಿಸುವವರೆಗೆ ಮೇಲ್ಕಂಡಂತೆ ಶುಲ್ಕವನ್ನು ವಿಧಿಸುವುದು. ಅಂತಿಮ ನಿಯಮದಲ್ಲಿ ಒಂದು ವೇಳೆ ಶುಲ್ಕವು ಮೇಲೆ ತಿಳಿಸಿರುವ ಶುಲ್ಕಕ್ಕಿಂತ ಹೆಚ್ಚಿದ್ದಲ್ಲಿ ಸದರಿ ಹೆಚ್ಚುವರಿ ಶುಲ್ಕವನ್ನು ಭರಿಸುವುದಾಗಿ ಅರ್ಜಿದಾರರಿಂದ ಮುಚ್ಚಳಿಕೆ ಪತ್ರವನ್ನು ಪಡೆಯುವ ಷರತ್ತಿಗೊಳಪಟ್ಟು ಅನುಮೋದನೆ ನೀಡತಕ್ಕದ್ದು ಹಾಗೂ ಸದರಿ ಹೆಚ್ಚುವರಿ ಶುಲ್ಕವನ್ನು ಅರ್ಜಿದಾರರು ಭರಿಸಿದ ನಂತರವಷ್ಟೆ ಅಂತಿಮವಾಗಿ ಪ್ರಾಧಿಕಾರಗಳು ವಿನ್ಯಾಸದಲ್ಲಿ ನಿವೇಶನವನ್ನು ಬಿಡುಗಡೆಗೊಳಿಸತಕ್ಕದ್ದು.

(ನಾಗರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಸಂ:ನಗ್ರಾಯೋ:ಜಂ.ನಿ: :2016

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿ,
ಬಹುಮಹಡಿಗಳ ಕಟ್ಟಡ, 4ನೇ ಹಂತ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 07 JAN 2017

ಯಥಾ ಪ್ರತಿಯನ್ನು ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

1. ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ವಲಯ ಕಛೇರಿ, ಧಾರವಾಡ ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
2. ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ವಿಭಾಗೀಯ ಕಛೇರಿ, ಬೆಂಗಳೂರು, ಮೈಸೂರು ಮತ್ತು ಗುಲ್ಬರ್ಗಾ ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
3. ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳ ಆಯುಕ್ತರಿಗೆ.
4. ರಾಜ್ಯದ ಎಲ್ಲಾ ಯೋಜನಾ ಪ್ರಾಧಿಕಾರಗಳ ಸದಸ್ಯ ಕಾರ್ಯದರ್ಶಿಗಳು.
5. ರಾಜ್ಯದ ಎಲ್ಲಾ ನಗರಸಭೆ/ ಪುರಸಭೆಯ ಮುಖ್ಯಾಧಿಕಾರಿಗಳು.
6. ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು.
7. ಇಲಾಖೆಯ ಎಲ್ಲಾ ಶಾಖಾ ಕಛೇರಿಗಳಿಗೆ ಮಾಹಿತಿಗಾಗಿ.
8. ಕೇಂದ್ರ ಕಛೇರಿಯ ಅಧಿಕಾರಿ ಹಾಗೂ ತಾಂತ್ರಿಕ ಸಿಬ್ಬಂದಿಯವರಿಗೆ ಮಾಹಿತಿಗಾಗಿ ನೀಡಲಾಗಿದೆ.
9. ಕಛೇರಿ ಪ್ರತಿ.

Shaukat Ali. M.S 6.1.17
ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಪರವಾಗಿ